# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಉತ್ತರ ಕನ್ನಡ ಜಿಲ್ಲೆ ದಾಂಡೇಲಿ ಪಟ್ಟಣದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂ.ನಅಇ 76:ಟಿಟಿಪಿ:98 ದಿ:23-4-98.

2) ನಗರ ಯೋಜನಾ ಪ್ರಾಧಿಕಾರ, ದಾಂಡೇಲಿ ಇವರ ಪತ್ರ ಸಂ. ನಯೋಪ್ರಾ:ದಾಂ:ವ್ಯಾಯೋ:111:99-2000, ದಿನಾಂಕ 25-1-2000.

3) ನಗರ ಯೋಜನಾ ನಿರ್ದೇಶಕರ ಪತ್ರ ಸಂ.ನಯೋ:ಉನಿ:ಕೇಕಾ:ದಾಂಡೇಲಿ:ಪವ್ಯಾಅಯೋ:955:99-2000 ದಿನಾಂಕ 8-2-2000.

---

ಪ್ರಸ್ತಾವನೆ:-

ಮೇಲೆ ಉಲ್ಲೇಖ (1) ರಲ್ಲಿ ಓದಲಾದ ಆದೇಶದಲ್ಲಿ ದಾಂಡೇಲಿ ಪಟ್ಟಣದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಮಂಜೂರಾತಿ ನೀಡಲಾಗಿರುತ್ತದೆ. ಉಲ್ಲೇಖ (2)ರ ಪತ್ರದಲ್ಲಿ ತಾತ್ಕಾಲಿಕ ಅನುಮೋದನೆಗೊಂಡಿದ್ದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ನಿಗದಿತ ಅವಧಿಯಲ್ಲಿ ಪಡೆದು, ದಾಂಡೇಲಿ ಪಟ್ಟಣದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಅಂತಿಮ ಅನುಮೋದನೆ ಕೋರಿರುತ್ತಾರೆ. ಉಲ್ಲೇಖ (3)ರ ಪತ್ರದಲ್ಲಿ, ದಾಂಡೇಲಿ ಪಟ್ಟಣದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ 2011ನೇ ಇಸವಿಗೆ ಅಂದಾಜಿಸಲಾಗಿ, ಸುಮಾರು 1,45,000 ಜನಸಂಖ್ಯೆಗೆ ಸದರಿ ಯೋಜನೆಯಡಿ ಒಟ್ಟು 1430 ಹೆಕ್ಟೇರ್ ಪ್ರದೇಶ ಬೇಕಾಗಬಹುದೆಂದು ಲೆಕ್ಕ ಹಾಕಿ ಸದರಿ ವಿಸ್ತೀರ್ಣದಲ್ಲಿ 536.8 ಹೆಕ್ಟೇರ್ (ಶೇಕಡ 40.62) ಪ್ರದೇಶವನ್ನು ವಸತಿಗಾಗಿ 95.08 ಹೆಕ್ಟೇರ್ ಪ್ರದೇಶವನ್ನು (7.09) ಕೈಗಾರಿಕೆಗಾಗಿ 264.76 (19.74) ಹೆಕ್ಟೇರ್ ಜಮೀನನ್ನು ಕಾದಿರಿಸಲಾಗಿದ್ದು, ಇನ್ನಿತರ ಆಗತ್ಯ ಉಪಯೋಗಗಳಿಗೆ ಅಂದರೆ, ಸಾರ್ವಜನಿಕ, ಉದ್ಯಾನವನ ಮತ್ತು ಬಯಲು ಜಾಗಗಳನ್ನು ತಕ್ಕುದ ಬೆಳವಣಿಗೆಯ ಆಗತ್ಯಕ್ಕೆ ಅನುಗುಣವಾಗಿ ಸೂಕ್ತ ಸ್ಥಳದಲ್ಲಿ ಕಾಯ್ದಿರಿಸಿದ್ದು, ಯೋಜನೆಯ ಅನುಷ್ಠಾನಕ್ಕೆ ತರಲು ಆಗತ್ಯವಾದ ವಲಯ ನಿಯಮಾವಳಿಗಳನ್ನು ರೂಪಿಸಲಾಗಿ, ದಾಂಡೇಲಿ ಪಟ್ಟಣದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ 1961 ರ ಕಲಂ 22(3) ರಂತೆ ನಿಬಂಧನೆಗಳಿಗೊಳಪಟ್ಟು ಅಂತಿಮ ಅನುಮೋದನೆ ನೀಡಲು ನಗರ ಯೋಜನಾ ನಿರ್ದೇಶಕರು ಕೋರಿರುತ್ತಾರೆ. ವಿಷಯವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## ಸರ್ಕಾರಿ ಆದೇಶ ಸಂ.ನಅಇ 72 ಟಿಟಿಪಿ 2000, ಬೆಂಗಳೂರು ದಿ:23-6-2000

ಉತ್ತರ ಕನ್ನಡ ಜಿಲ್ಲೆ, ದಾಂಡೇಲಿ ಪಟ್ಟಣದ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 22(3) ರಂತೆ, ಸರ್ಕಾರವು ಅಂತಿಮ ಅನುಮೋದನೆ ನೀಡಿದೆ. ವ್ಯಾಪಕಾಭಿವೃದ್ಧಿ ಯೋಜನೆಗೆ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

AMokhtar

(ಅಹ್ಮದ್ ಎಂ.ಮುಖ್ತಾರ್),
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.